# ‘ಸುಧಾ’ ಜೊತೆ ಓದುಗರ ಒಡನಾಟ

## ತವರಿನ ಸಿರಿ

ನನಗೆ ನಿಯತಕಾಲಿಕೆಗಳನ್ನು ಓದಲು ಕಲಿಸಿದ್ದೇ ನನ್ನ ದೊಡ್ಡಣ್ಣ. ಅವನಿಂದಲೇ ನನಗೆ ‘ಸುಧಾ’ ಓದುವ ಹುಚ್ಚು ಬಂದಿದ್ದು. ನನಗೂ, ‘ಸುಧಾ’ಳಿಗೂ ಮೂರು ಮೂರೂವರೆ ದಶಕಗಳ ಸಂಬಂಧ. ‘ಸುಧಾ’ ಪತ್ರಿಕೆ ಹುಚ್ಚು ಎಷ್ಟೆಂದರೆ ದಿನಾಂಕದಿಂದ ಆರಂಭಿಸಿ ಕೊನೆಯ ಪುಟದವರೆಗೂ ಒಂದಕ್ಷರವನ್ನೂ ಬಿಡದೇ ಓದುತ್ತೇನೆ. ನನ್ನ ಹುಟ್ಟೂರಿನಿಂದ ಬೆಂಗಳೂರಿಗೆ ಬಂದಾದ ಮೇಲೂ ಮರೆತಿಲ್ಲ ಅವಳನ್ನು.

ಒಂದೇ ಬದಲಾವಣೆ ಅಂದರೆ, ಈಗ ಬೆಂಗಳೂರಿನಲ್ಲಿ ನನ್ನ ಚಿಕ್ಕಣ್ಣ ‘ಸುಧಾ’ ತರಿಸುತ್ತಿದ್ದಾನೆ, ಕೇವಲ ನನಗಾಗಿ. ಪ್ರತಿ ಗುರುವಾರ ಅವನ ಮನೆಗೆ ನಾನು ಹೋಗುವುದೇ ‘ಸುಧಾ’ ಓದಲು. ನನಗೆ ಪ್ರತಿವಾರ ಅಣ್ಣನ ಉಡುಗೊರೆ ಇವತ್ತಿಗೂ ಸಿಗುತ್ತಿರುವುದು ಖುಷಿ. ಅದಕ್ಕಾಗಿಯೇ ನಾನು ಹೇಳುವುದು ‘ಸುಧಾ’ ನನ್ನ ತವರಿನ ಸಿರಿ ಎಂದು.

—ಸುರೇಖಾ ಎಸ್. ದೇಶಪಾಂಡೆ, ಬೆಂಗಳೂರು

## ಬಿಡದ ಬೆಸುಗೆಯಿದು

‘ಸುಧಾ’ ಪತ್ರಿಕೆ ಪ್ರಾರಂಭವಾದಾಗ ನನಗೆ ಹದಿನೈದರ ಹರೆಯ. ಮೊಟ್ಟ ಮೊದಲ ಸಂಚಿಕೆ ಕೊಂಡು ತಂದಾಗ ಮನೆ ಮಂದಿಗೆಲ್ಲಾ ಹರುಷ. ವಿಷಯ ವೈವಿಧ್ಯದಿಂದ ಎಲ್ಲ ವಯೋಮಾನದವರ ಮೆಚ್ಚುಗೆ ಗಳಿಸಿದ ಪುಸ್ತಕ. ಅಂದಿನ ದಿನಮಾನದಲ್ಲಿ ಇದಕ್ಕೆ ಸರಿಸಾಟಿಯಾದ ಪುಸ್ತಕ ಬೇರೊಂದಿರಲಿಲ್ಲ. ಮುಖಪುಟದ್ದೇ ಒಂದು ವಿಶೇಷ ಆಕರ್ಷಣೆ.

ಒಳಗಿನ ಪುಟಗಳಲ್ಲಿ ಸ್ಫುಟವಾದ ಅಕ್ಷರ. ಉತ್ತಮ ವಿನ್ಯಾಸ. ಸುಲಭವಾಗಿ ಓದಿಸಿಕೊಂಡು ಹೋಗುವ ಶೈಲಿ. ಮಸ್ತಿಷ್ಕದಲ್ಲಿ ಹಗುರವಾಗಿ ಕೂರುವ ಹಿತಮಿತವಾದ ವಿವರಗಳು, ವಿಚಾರಗಳು, ಕವನಗಳು ಇತ್ಯಾದಿ...

ಮನೆಯವರೆಲ್ಲಾ ಓದಲು ನಾ ಮುಂದು, ತಾ ಮುಂದು ಎಂದು ಹಾತೊರೆಯುತ್ತಿದ್ದರು. ‘ಸುಧಾ’ ಓದಿನ ನಂತರ ಅದರ ಮುಖಪುಟವನ್ನು ಹರಿದು ಶಾಲೆಯ ಪಠ್ಯಪುಸ್ತಕದ ರಕ್ಷಾಪುಟದ




ಒಳಭಾಗಕ್ಕೆ ಅಂಟಿಸುವುದು ನನ್ನ ಅಭ್ಯಾಸ. ನನಗೆ ಬರೆಯುವ ಹವ್ಯಾಸವಿತ್ತು. ಹಾಗೊಮ್ಮೆ ಹೀಗೊಮ್ಮೆ ಸಣ್ಣಪುಟ್ಟ ಬರಹಗಳನ್ನು ಬರೆದು ಕಳುಹಿಸುತ್ತಿದ್ದೆ. ನನ್ನ ಇನ್ನೊಂದು ಹವ್ಯಾಸವಾದ ಛಾಯಾಗ್ರಹಣವೂ ಕೈಗೂಡಿದಾಗ ಬರಹಗಳ ಜೊತೆ ಛಾಯಾಚಿತ್ರಗಳನ್ನು ಸಹ ಕಳುಹಿಸುತ್ತಿದ್ದೆ. ಅವುಗಳು ಪ್ರಕಟವಾದಾಗ ಬಹಳ ಸಂತೋಷಪಡುತ್ತಿದ್ದೆ. ಹೀಗೆ ನನ್ನ ನಂಟು ‘ಸುಧಾ’ದೊಂದಿಗೆ ಮುಂದುವರೆದಿದೆ.

—ಕೋ. ಪದ್ಮನಾಭ

## ‘ಸುಧಾ’ ಬೆಳೆಯುಲಿ... ಬೆಳಗಲಿ...

ನನಗೀಗ 70 ವರ್ಷ. ಸರ್ವಾಂಗಸುಂದರಿ ‘ಸುಧಾ’ ನನ್ನ ಅಚ್ಚುಮೆಚ್ಚಿನ ಕನ್ನಡ ವಾರಪತ್ರಿಕೆ. ನನ್ನ ಮಾತೃಭಾಷೆ ಉರ್ದು ಆದರೂ ನಾನೊರ್ವ ಕನ್ನಡದ ಅಪ್ಪಟ ಅಭಿಮಾನಿ ಕನ್ನಡಿಗ. ಕಳೆದ ನಾಲ್ಕೈದು ದಶಕಗಳಿಂದಲೂ ‘ಸುಧಾ’ ನನ್ನ ಪರಮಾಪ್ತೆ. ಇಂದಿಗೂ ಪ್ರತಿ ಗುರುವಾರದಂದು ಚಾತಕ ಪಕ್ಷಿಯಂತೆ ಕಾಯುತ್ತಿದ್ದು, ‘ಸುಧಾ’ ಬಂದ ತಕ್ಷಣ ಮೊಟ್ಟ ಮೊದಲಿಗೆ ಪದಬಂಧವನ್ನು ಯಾವುದೇ ತಪ್ಪಿಲ್ಲದೆ ಬಿಡಿಸುವುದು ಇಂದಿಗೂ ನನಗಿಷ್ಟ. ನನ್ನ ನೆಚ್ಚಿನ ಇತರ ಅಂಕಣಗಳು ‘ನೀವು ಕೇಳಿದಿರಿ’, ‘ನಕ್ಕು ಬಿಡಿ’, ‘ಮಾತೇ ಮುತ್ತು’, ‘ವಿಚಾರ ಲಹರಿ’, ‘ನಗೆ ಹೊನಲು’, ‘ಕಥೆ’ ಮುಂತಾದವು.

ಎಂದೂ ತನ್ನ ಜಾತ್ಯತೀತ ದೃಷ್ಟಿಕೋನ ಹಾಗೂ ಸೌಹಾರ್ದತೆಗೆ ಚ್ಯುತಿ ಬರದಂತೆ ಪತ್ರಿಕಾ ಧರ್ಮವನ್ನು ಉಳಿಸಿಕೊಂಡಿರುವ ‘ಸುಧಾ’ಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು. ‘ಸುಧಾ’ ಬೆಳೆಯಲಿ... ಬೆಳಗಲಿ...

—ಅಖ್ತರ್ ಅಹಮದ್ ಖಾನ್, ಮಂಗಳೂರು

## ನಮ್ಮ ಬದುಕಿನ ಭಾಗ

40 ವರ್ಷಗಳ ಒಡನಾಟ ನನ್ನ ಹಾಗೂ ‘ಸುಧಾ’ ಪತ್ರಿಕೆಯದ್ದು. ಈಗಲೂ ಗುರುವಾರ ಕೌತುಕದಿಂದ ಕಾಯುವೆ. ಬಾಲ್ಯದಲ್ಲಿ ಪುಟಾಣಿ ಪುಟ್ಟಿ, ಫ್ಯಾಂಟಮ್ ಓದುತ್ತಾ ಬೆಳೆದ ನಾನು, ನನಗೇ ಗೊತ್ತಿಲ್ಲದಂತೆ ಧಾರಾವಾಹಿ ಗೀಳು ಅಂಟಿಸಿಕೊಂಡೆ. ಮುಂದೆ ಅದುವೇ ಕನ್ನಡ ಸಾಹಿತ್ಯದಲ್ಲಿ ಅಭಿರುಚಿ ಮೂಡಿಸಿದ್ದೆಂದರೆ ತಪ್ಪಾಗದು. ಪದಬಂಧವನ್ನು ಇಂದು ಕೂಡ ಅಷ್ಟೇ ಆಸಕ್ತಿಯಿಂದ ಬಿಡಿಸುವೆ.

‘ನೀವು ಕೇಳಿದಿರಿ’, ‘ನಕ್ಕುಬಿಡಿ’ ಮುದ ನೀಡುತ್ತವೆ. ಪ್ರಸ್ತುತ ವಿದ್ಯಮಾನಗಳನ್ನು ಪರಿಚಯಿಸುತ್ತ ‘ಸುಧಾ’ ಇಂದಿಗೂ ನಮ್ಮ ಬದುಕಿನ ಭಾಗವಾಗಿದೆ.

—ಶೈಲಜಾ ಎನ್. ಬಾಗೇವಾಡಿ ಕಲಬುರಗಿ

## ಮಕ್ಕಳ ಪುಟ ಹೆಚ್ಚಲಿ

60ನೇ ವಜ್ರಮಹೋತ್ಸವದ ಸಂದರ್ಭದಲ್ಲಿ ನನ್ನ ಮೆಚ್ಚಿನ ‘ಸುಧಾ’ದಲ್ಲಿ ಮಕ್ಕಳ ಪುಟಗಳು ಇನ್ನಷ್ಟು ಹೆಚ್ಚಾಗಿ ಮೂಡಿಬರಲಿ ಎಂದು ಆಶಿಸುತ್ತೇನೆ.

—ಗೋಪಾಲ್ ಸೂಲಿಕೆರೆ

## ಒಂದಕ್ಷರವನ್ನೂ ಬಿಡದೆ ಓದುವೆ

‘ಸುಧಾ’ ನನಗೆ ಅಕ್ಕನ ಸಮಾನ. ಏಕೆಂದರೆ, ನನಗೆ 59 ವರ್ಷ. ನಾನು 5ನೇ ತರಗತಿಯಲ್ಲಿ ಓದುತ್ತಿದ್ದಾಗಿನಿಂದ, ಅಂದರೆ 1975ನೇ ಇಸವಿಯಿಂದ ಇಂದಿನವರೆಗೂ ತಪ್ಪದೇ ಓದುತ್ತಾ ಬಂದಿದ್ದೇನೆ. ಅಂದಿನ ‘ಅಂಬುತೀರ್ಥ’, ‘ಅಸ್ಪೃಶ್ಯರು’, ‘ಪ್ರಕೃತಿ’, ‘ಅಂತ’ ಮುಂತಾದ ಧಾರಾವಾಹಿಗಳು ನನ್ನ ಮನಸೆಳೆದಿದ್ದವು. ಈಗ ಉಳಿದ ಎಲ್ಲಾ ಅಂಕಣಗಳನ್ನು ಒಂದಕ್ಷರವೂ ಬಿಡದಂತೆ ಓದುತ್ತಿದ್ದೇನೆ.

—ಜಗದೀಶ ಬಿ. ಹೊಸೂರು, ಮೈಸೂರು

## ಜೀವನ ಸ್ಫೂರ್ತಿ

ನಾನು ತುಂಬಾ ವರ್ಷಗಳಿಂದ ‘ಸುಧಾ’ ಓದುತ್ತಿದ್ದೇನೆ. ‘ಸುಧಾ’ದಲ್ಲಿ ಬರುವ ಧಾರಾವಾಹಿ, ಮಕ್ಕಳ ಕಥೆ, ಅನೇಕ ಸಾಹಿತ್ಯ ಹಾಗೂ ಸಾಧಕರ ಪರಿಚಯ, ಸುದ್ದಿಗಳು ನಾನಾ ರೀತಿಯಲ್ಲಿ ನಮ್ಮ ಜೀವನಕ್ಕೆ ಹತ್ತಿರವಾಗಿವೆ. ನನಗೆ ಓದುವ ಹವ್ಯಾಸವನ್ನು ಕಲಿಸಿಕೊಟ್ಟದ್ದೇ ‘ಸುಧಾ’. ಇದರಲ್ಲಿ ಬರುವ ಅನೇಕ ವಿಷಯಗಳು ನಮಗೆ ಜೀವನ ಸ್ಫೂರ್ತಿಯಾಗಿವೆ.

—ಎಂ. ದೇವಿಕಾ ನಾಗರಾಜ, ರಾಯಚೂರು